ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಇ–ಆಡಳಿತ ಶಿಕ್ಷಕರ ಮಾಹಿತಿ 01/2017–18 ದಿನಾಂಕ: 04.05.2017

**ವಿಶೇಷ ಗಮನಕ್ಕಾಗಿ**

# ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರ ಸೇವಾ ಮಾಹಿತಿಗಳನ್ನು ನಮೂನೆಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡುವ ಬಗ್ಗೆ.

ಸರ್ಕಾರಿ ಪ್ರೌಢ, ಪ್ರಾಥಮಿಕ, ಅನುದಾನಿತ ಪ್ರೌಢ, ಪ್ರಾಥಮಿಕ ಶಾಲಾ ಶಿಕ್ಷಕರು ನಮೂನೆಯಲ್ಲಿ ಭರ್ತಿ ಮಾಡುವಾಗ, ಈ ಕೆಳಗೆ ನಮೂದಿಸಿದಂತೆ ಕ್ರಮವಹಿಸಲು ಈ ಮೂಲಕ ತಿಳಿಸಿದೆ.

- ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ನಮೂನೆಯಲ್ಲಿ ಕ್ರಮ ಸಂಖ್ಯೆ: 11. ಸೇವೆಗೆ ಸೇರಿದ ದಿನಾಂಕ: ಎಂದಿರುವಲ್ಲಿ ಪ್ರಸ್ತುತ ಹುದ್ದೆಗೆ ಸೇರಿದ ದಿನಾಂಕ ಎಂದು ಪರಿಗಣಿಸಿ, ಭರ್ತಿ ಮಾಡುವುದು.
- ಸರ್ಕಾರಿ ಪ್ರೌಢ, ಪ್ರಾಥಮಿಕ, ಅನುದಾನಿತ ಪ್ರೌಢ, ಪ್ರಾಥಮಿಕ ಶಾಲಾ ಶಿಕ್ಷಕರ ನಮೂನೆಯಲ್ಲಿರುವ ಸೇವೆಯ ವಿವರವನ್ನು ಕ್ರಮ ಸಂಖ್ಯೆ: 12 ಎಂದು ಓದಿಕೊಂಡು, ಅದರಲ್ಲಿ ಇಂದ ಕಾಲಂ ನಲ್ಲಿರುವ ಜೂನ್ 2007 ಅನ್ನು ಜೂನ್ 2000 ಎಂದು ಪರಿಗಣಿಸುವುದು.
- ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ನಮೂನೆಯಲ್ಲಿರುವ ಕ್ರಮ ಸಂಖ್ಯೆ: 12. ವಿದ್ಯಾರ್ಹತೆ ಅನ್ನು ಕ್ರಮ ಸಂಖ್ಯೆ: 13. ವಿದ್ಯಾರ್ಹತೆ ಎಂದು ಓದಿಕೊಳ್ಳುವುದು.

ಶಿಕ್ಷಕರಿಂದ ಭರ್ತಿ ಮಾಡಿದ ನಮೂನೆಗಳನ್ನು ವಾಪಸ್ಸು ಪಡೆಯುವಾಗ ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು (D.D.O's) ಮುಖ್ಯ ಶಿಕ್ಷಕರು/ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಅಂಶವನ್ನು ಗಮನಿಸಿಕೊಂಡು ವಾಪಸ್ಸು ಪಡೆಯವುದು.

ಜಂಟಿ ನಿರ್ದೇಶಕರು (ಆಡಳಿತ)

**ಇವರಿಗೆ**

1. ನಿರ್ದೇಶಕರು, ಎಸ್.ಎಸ್.ಎ./ ಆರ್.ಎಂ.ಎಸ್.ಎ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
4. ಸಂಬಂದಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.